**ದಿನಾಂಕಃ 29.12.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲು: 3 ನೇ ಎದುರುದಾರರ / Insurance company ಪರ ವಕೀಲರಾದ ಶ್ರೀ.ATN ರವರಿಂದಃ**

1) ಅಪಘಾತವು ಆದ ನಂತರ ಅಪಘಾತದ ವಿಷಯವನ್ನು ನಾವು ವಿಮಾ ಕಂಪೆನಿಯವರಿಗೆ ದೂರವಾಣಿ ಮೂಲಕ ತಿಳಿಸಿದ್ದೇವೆ. ಕೆಎ-**51**-ಎಬಿ-**2229** ಸಂಖ್ಯೆಯ ಮಿನಿ ಬಸ್ ವಾಹನವು ನನ್ನ ತಾಯಿ ಆದಂತಹ ಶ್ರೀಮತಿ.ನಳಿನ ರವರ ಹೆಸರಿನಲ್ಲಿ ಇದೆ. ಅಪಘಾತವು ಆದ ದಿನದಂದು ಕೆಎ-**51**-ಎಬಿ-**2229** ಸಂಖ್ಯೆಯ ಬಸ್ಸನ್ನು ಓರ್ವ ಪ್ರದೀಪ್ ಎನ್ನುವವರು ಚಾಲನೆ ಮಾಡುತ್ತಿದ್ದರು. ಸದರಿ ಪ್ರದೀಪ್ ರವರಿಗೆ ಸಮರ್ಪಕವಾದ ಚಾಲನಾ ಪರವಾನಗಿಯು ಇತ್ತು. ಸದರಿ ಪ್ರದೀಪ್ ರವರ ಚಾಲನಾ ಪರವಾನಗಿಯ ಪ್ರತಿಯನ್ನು ಹಾಜರುಪಡಿಸಲಾಗಿದೆ.

2) ಕೆಎ-**51**-ಎಬಿ-**2229** ಸಂಖ್ಯೆಯ ಮಿನಿ ಬಸ್ ವಾಹನಕ್ಕೆ ಸಂಬಂಧಿಸಿದಂತೆ ವಿಮಾ ಪಾಲಿಸಿಯನ್ನು ಪಡೆದುಕೊಳ್ಳಲಾಗಿತ್ತು ಮತ್ತು ಸದರಿ ವಿಮಾ ಪಾಲಿಸಿಯನ್ನು ಹಾಜರುಪಡಿಸಿದ್ದೇನೆ. ಸದರಿ ವಿಮಾ ಪಾಲಿಸಿಯನ್ನು ನಮ್ಮ ತಾಯಿಯಾದ ನಳಿನ ರವರ ಹೆಸರಿನಲ್ಲಿ ಪಡೆದುಕೊಳ್ಳಲಾಗಿತ್ತು.

3) ಅಪಘಾತವು ಆದ ದಿನದಂದು ಮೇಲೆ ಹೇಳಿದ ವಾಹನಕ್ಕೆ ಪರ್ಮಿಟ್ ಇತ್ತು.

ಸದರಿ ಪರ್ಮಿಟ್ ನಕಲನ್ನು ಹಾಜರುಪಡಿಸಿದ್ದೇನೆ. ನಿ.ಆರ್.**6** ದಾಖಲೆಯಲ್ಲಿ ಇರುವ ಮಾಹಿತಿಯ ಪ್ರಕಾರ ಪರ್ಮಿಟ್ ಅನ್ನು **12.09.2023** ರಂದು ಪಡೆದುಕೊಳ್ಳಲಾಗಿದೆ ಮತ್ತು ಅದರ ಅವಧಿಯು **11.09.2028** ರಂದು ಮುಕ್ತಾಯ ಆಗುತ್ತದೆ ಎಂದು ಕಂಡು ಬರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು "ಆ ಪರ್ಮಿಟ್ ಪಡೆದುಕೊಳ್ಳಲು ಹಣವನ್ನು ದಿಃ**06.05.2023** ರಂದು ಕಟ್ಟಲಾಗಿದೆ" ಎಂದು ನುಡಿದಿದ್ದಾರೆ. ನಾನು ಹಾಜರುಪಡಿಸಿರುವಂತಹ ದಾಖಲೆಯಲ್ಲಿ ಇರುವಂತಹ ಮಾಹಿತಿಯ ಪ್ರಕಾರವೇ ಅಪಘಾತವು ಆದ ದಿನದಂದು ನಮ್ಮ ವಾಹನಕ್ಕೆ ಪರ್ಮಿಟ್ ಇರಲಿಲ್ಲ ಎಂದರೆ ಸುಳ್ಳು.

4) ಅಪಘಾತವು ಪ್ರದೀಪ್ ರವರ ತಪ್ಪಿನಿಂದ ಆಗಿದೆ ಮತ್ತು ಸದರಿ ವಾಹನಕ್ಕೆ ಪರ್ಮಿಟ್ ಇರಲಿಲ್ಲ ಮತ್ತು ಆ ಕಾರಣದಿಂದ ಅರ್ಜಿದಾರರಿಗೆ ನಾವೇ ಪರಿಹಾರವನ್ನು ಕೊಡಬೇಕಾಗಿದೆ ಎಂದರೆ ಸುಳ್ಳು.

**ಅನುಮತಿಯ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಶ್ರೀ.ಅಕ್ಷರ ಹೆಗ್ಡೆ ವಕೀಲರಿಂದಃ**

5) **Karnataka State Transport Authority, Bengaluru,** ರವರು ದಿಃ **12.09.2023** ರಂದು ನೀಡಿರುವಂತಹ ಒಂದು ದಾಖಲೆಯನ್ನು ನಿ.ಆರ್.**7** ಎಂದು ಗುರುತಿಸಿದೆ.

**<u>ಪಾಟೀ ಸವಾಲು: ಅರ್ಜಿದಾರರ ಪರ ವಕೀಲರಿಂದಃ</u>**

ಸದರಿ ಅರ್ಜಿದಾರರು ಮತ್ತು ಅವರ ಪರ ವಕೀಲರು ಹಾಜರಿಲ್ಲ. ಆದ ಕಾರಣದಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.